# ಶ್ರೀರಾಮಕೃಷ್ಣರ ಸಂವಹನ ಕೌಶಲ್ಯ

**ಡಾ.ಎಚ್.ಪಾಂಡುರಂಗ ವಿಠಲ**

ಒಬ್ಬೊಬ್ಬ ವ್ಯಕ್ತಿಯ ಭಾಷೆಯೂ ಬೇರೆಯೇ ಆದುದು ಎನ್ನುತ್ತಾರೆ. ಭಾವನೆಗಳ ಅಭಿವ್ಯಕ್ತಿಗೆ ಪ್ರತಿಯೊಬ್ಬ ಬಳಸುವ ಭಾಷೆಯೂ ಭಿನ್ನವಾಗಿರುತ್ತದೆ ಎಂಬ ಅರ್ಥದಲ್ಲಿ ಈ ಮಾತು ನಿಜ. ಆಧ್ಯಾತ್ಮಿಕ ಅನುಭವಗಳಿಂದ ಸಂಪನ್ನನಾದ ಒಬ್ಬ ವ್ಯಕ್ತಿ ತನ್ನ ಅನುಭವಗಳನ್ನು ಭಾಷೆಯ ಮೂಲಕ ವ್ಯಕ್ತಪಡಿಸುವ ಬಗೆ ಹೇಗೆ ಎಂಬುದನ್ನು ಶ್ರೀರಾಮಕೃಷ್ಣರ ಉದಾಹರಣೆಯ ಮೂಲಕ ಕಾಣುವ ಪ್ರಯತ್ನ ಇಲ್ಲಿದೆ. ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

## ಸಂವಹನ

ಜ್ಞಾನವನ್ನು ಇನ್ನೊಬ್ಬರಿಗೆ ವರ್ಗಾಯಿಸುವ ಪ್ರಕ್ರಿಯೆ ಸಂವಹನ. ಮಾತು, ಬರಹ ಅಥವಾ ಸಂಜ್ಞೆಯ ಮೂಲಕ ಭಾವನೆ, ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂವಹನ ಎನ್ನುತ್ತಾರೆ. ತಿಳಿಸುವವ, ತಿಳಿಯುವವ ಮತ್ತು ಸಂಪರ್ಕ ಸಾಧನದಿಂದ ತಿಳಿಯಲ್ಪಡುವ ಸಂದೇಶ ಎಂಬ ಮೂರು ಅಂಶಗಳು ಇಲ್ಲಿವೆ. ಮಾತು, ಸಂಕೇತ, ಸ್ಪರ್ಶ, ಕಣ್ಣ ನೋಟ, ಧ್ವನಿಯ ಏರಿಳಿತ, ಆಂಗಿಕ ಭಾಷೆ, ಕೇಳುವಿಕೆ ಮತ್ತು ಬರಹಗಳಿಂದ ಸಂವಹನ ಸಾಧ್ಯವಾಗುತ್ತದೆ. ಲಿಪಿಯ ಸಂಶೋಧನೆ ಸಂವಹನದಲ್ಲಿದ್ದ ಕಾಲದ ಪರಿಮಿತಿಯನ್ನು ತೆಗೆದು ಹಾಕಿತು; ಮಾಹಿತಿ ವಿಜ್ಞಾನದ ಕ್ರಾಂತಿಯಿಂದಾಗಿ ಇಲೆಕ್ಟ್ರಾನಿಕ್ ಸಂಕೇತಗಳ ಮೂಲಕ ಹರಿವನ್ನು ಪಡೆದು ಸಂವಹನಕ್ಕೆ ದೇಶದ ಪರಿಮಿತಿಯೂ ಇಲ್ಲವಾಯಿತು. ಸಂವಹನ ಒಂದು ನಿರಂತರ ಪ್ರಕ್ರಿಯೆ ಆಯಿತು. ಈಗ ಅರ್ಥ ಮಾಡಿಕೊಳ್ಳುವುದಕ್ಕಿಂತ ಹೆಚ್ಚಿನ ಮಾಹಿತಿ, ಸಂದೇಶದ ಸಂಕೀರ್ಣತೆ ಸಂವಹನ ಎದುರಿಸುತ್ತಿರುವ ಸಮಸ್ಯೆಗಳಾಗಿವೆ. ಅಲ್ಲದೆ ಸಂಶೋಧನೆಯ ಪ್ರಕಾರ ಮಾನವರಲ್ಲಿನ ಸಂವಹನೆಯ ಶೇಕಡ ೫೫ ಭಾಗವು ನಿಲುವು, ಭಂಗಿ, ಆಂಗಿಕ ಸನ್ನೆಗಳು, ಮುಖಭಾವ ಮತ್ತು ಕಣ್ಣಿನ ಸಂಪರ್ಕದಿಂದಲೂ, ಶೇಕಡ ೩೮ರಷ್ಟು ಧ್ವನಿಯ ಏರಿಳಿತದಿಂದಲೂ, ಕೇವಲ ಶೇಕಡ ೭ರಷ್ಟು ಮಾತ್ರ ಸಂವಹನ ಪ್ರಕ್ರಿಯೆಯಲ್ಲಿ ಬಳಸಿದ ವಿಷಯ ಅಥವಾ ಪದಗಳಿಂದ ಅಂದರೆ ಭಾಷೆಯಿಂದ ಸಾಧಿತವಾಗುತ್ತದೆ. ಹೀಗೆ ಪದರಹಿತ ಸಂವಹನವೇ ಮುಖ್ಯ; ಮಾತಾಡುವವರ ಮತ್ತು ಕೇಳುಗರ ನಡುವಿನ ಸಂಬಂಧವೂ ಹೆಚ್ಚು ಮುಖ್ಯ. ಸಂವಹನವು ನಿರಂತರ ಪ್ರಕ್ರಿಯೆ — ಹಿಂದಿನ ನೆನಪು, ಮುಂದಿನ ಕುತೂಹಲ ಈಗಿನ ಸಂವಹನವನ್ನು ಅರ್ಥಪೂರ್ಣವಾಗಿಸುತ್ತದೆ. ಭಾಷೆಯ ಭಾಗ ಕಡಿಮೆಯೆ.

ನಿಲುವು, ಭಂಗಿ, ಆಂಗಿಕ ಸನ್ನೆಗಳು, ಮುಖಭಾವ, ನಡವಳಿಕೆ ಮತ್ತು ಕಣ್ಣಿನ ಸಂಪರ್ಕ ಮೊದಲಾದ ರೀತಿಯ ಸಾಮಾನ್ಯ ಸಂವಹನದಂತೆ ಉಡುಪು, ವಾಸ್ತುವಿನ್ಯಾಸ, ಮಾಹಿತಿನಕ್ಷೆ ಮೊದಲಾದ ಭೌತಿಕ ರೀತಿಯ ಸಂಕೇತಗಳೂ ತಮ್ಮದೇ ಸಂದೇಶ ನೀಡುತ್ತವೆ. ಇತರರ ನಡವಳಿಕೆ, ಮಾತುಗಳನ್ನು ಅಭಿನಯಿಸಿ ನಕಲಿ ಮಾಡುವುದು, ನಟನೆ, ಭಾಷೆಯಲ್ಲೇ ಅಂತರ್ಗತವಾಗಿರುವ ಲಯ, ಭಾವಪೂರ್ಣವಾಗಿ ಮಾತನಾಡುವ ಶೈಲಿ, ಧ್ವನಿಯ ಏರಿಳಿತ, ಒತ್ತು ನೀಡುವಿಕೆ, ದೃಷ್ಟಾಂತಗಳು, ಭಾವಗರ್ಭಿತ ಸಂಜ್ಞೆ, ಸ್ಪರ್ಶ, ತನ್ನ ಬಗೆಗೆ ಇತರರೇನನ್ನುವರು, ನೀನೇನು ತಿಳಿದೆ ಎನ್ನುವಂತಹ ಪ್ರಶ್ನೆಗಳು ಭಾವ ಸಂವಹನವನ್ನು ಪದರಹಿತವಾಗಿ ಸಾಧ್ಯವಾಗಿಸುತ್ತದೆ.

ಮಾಹಿತಿಯ ವಿನಿಮಯ ಪ್ರಾಣಿಗಳಲ್ಲೂ, ಅಷ್ಟೇ ಏಕೆ ಸಸ್ಯ, ಶಿಲೀಂಧ್ರ, ಬ್ಯಾಕ್ಟೀರಿಯದಂತಹ ಪ್ರಾಚೀನ ಜೀವಿಗಳಲ್ಲೂ ಇದೆ. ಪ್ರಾಚೀನ ಜೀವಿಗಳು ಪರಸ್ಪರ ರಾಸಾಯನಿಕ ಸಂವಹನ ಮಾಡುವುದನ್ನು ಪ್ರಾಥಮಿಕ ಮಟ್ಟದ್ದೆಂದು ಹೇಳಬಹುದು. ಪ್ರಾಣಿಗಳ ಸಂವಹನವು ದೇಹ ಚಲನೆಗಳನ್ನು ಹೊಂದಿದ್ದು, ಪ್ರಾಚೀನ ಜೀವಿಗಳಿಗಿಂತ ಸ್ವಲ್ಪ ಮೇಲ್ಮಟ್ಟದ ಸಂವಹನೆ ನಡೆಸುತ್ತವೆ. ಇದರ ಅತ್ಯಂತ ಅಭಿವೃದ್ಧ ರೀತಿ ಮಾನವರ ಸಂವಹನ. ಪ್ರಾಣಿ-ಮಾನವರ ನಡುವೆ ಸಂವಹನ ಸಾಧ್ಯ ಎನ್ನುವುದು ಸರ್ಕಸ್ಸಿನಿಂದ ತಿಳಿಯಬಹುದು. ಪರಿಣಾಮಕಾರಿ ಸಂವಹನವು ವಿಶ್ವ ಆರೋಗ್ಯ ಸಂಸ್ಥೆ ಗುರುತಿಸುವ ಹತ್ತು ಜೀವನ ಕೌಶಲ್ಯಗಳಲ್ಲಿ ಒಂದು. ಇತರರ ಭಾವನೆ, ಸಮಸ್ಯೆಗಳನ್ನು ಅರಿತು, ಪರಸ್ಪರ ಸಂಬಂಧವನ್ನು ಬೆಳೆಸಿಕೊಳ್ಳುವುದಕ್ಕೆ ಸಂವಹನ ಸಾಮರ್ಥ್ಯ ಆವಶ್ಯಕ.

ಸಂವಹನ ಸಾಮರ್ಥ್ಯದಲ್ಲಿ ಮುಖ್ಯವಾದುದು ಕೇಳಿಸಿಕೊಳ್ಳುವಿಕೆ. ಅನಂತರ ಟೀಕೆ, ವರ್ತನೆಗಳಿಗೆ ಪ್ರತಿಕ್ರಿಯಿಸುವುದು, ಕೋರಿಕೆಯನ್ನು ನಿರಾಕರಿಸುವುದು, ಸಹಾನುಭೂತಿ-ಬೆಂಬಲ ನೀಡುವುದು, ಸಂಪರ್ಕ ಪ್ರಯತ್ನಗಳಿಗೆ ಸರಿಯಾಗಿ ಪ್ರತಿಕ್ರಿಯಿಸುವುದು ಬರುತ್ತದೆ.

ಸಂವಹನ ಅರ್ಥಪೂರ್ಣವಾಗಿ ನಡೆಯಲು ಕೆಲವು ಸಾರ್ವತ್ರಿಕ ನಿಯಮಗಳಿವೆ: ಸಂವಹಿಸುವವರಿಗೆ ತಮ್ಮ ಆಲೋಚನೆ ಸ್ಪಷ್ಟವಾಗಿರಬೇಕು. ಏಕಕಾಲದಲ್ಲಿ ತಮ್ಮ ಸ್ಥಾನಗಳಿಗೆ ಅನುಗುಣವಾಗಿ ಪರಸ್ಪರ ತಿಳಿಯಲು ಸಿದ್ಧರಾಗಿರಬೇಕು. ಭಾಷೆಯು ನಾನಾ ಅರ್ಥಗಳನ್ನು ಹೊಂದಿರಬಾರದು ಹಾಗೂ ನುಡಿಗಟ್ಟುಗಳನ್ನು ಬಳಸಿದರೂ, ಅವುಗಳಲ್ಲಿನ ಇಂಗಿತ ಅಥವಾ ಧ್ವನಿ ನಿಖರವಾಗಿ, ಮನವರಿಕೆ ಆಗುವಂತೆ ಸ್ಪಷ್ಟವಾಗಿರಬೇಕು. ಮುಖದ ಅಭಿವ್ಯಕ್ತಿ, ಆಂಗಿಕ ಸಂಜ್ಞೆಗಳು ಅಂತಃಕರಣಕ್ಕೆ ಅನುಗುಣವಾಗಿದ್ದು, ಈ ಶಬ್ದರಹಿತ ಚಿಹ್ನೆಗಳಿಗೆ ಗಮನ ನೀಡಬೇಕು. ಒಟ್ಟಿನಲ್ಲಿ ಮಾನಸಿಕ

ಅಡೆತಡೆಗಳು ಗ್ರಹಿಕೆಯನ್ನು ಕ್ಲಿಷ್ಟಗೊಳಿಸಿ ಸಂವಹನವನ್ನು ಬದಲಿಸದಂತೆ ಎಚ್ಚರ ವಹಿಸಬೇಕು. ಅದಕ್ಕೆಂದೇ ಸಂವಹನ ಸಾಮಾಜಿಕವಾಗಿ ಬೆರೆಯುವ ಒಂದು ಕೌಶಲ್ಯ, ಒಂದು ಕಲೆ ಎಂದು ಪರಿಗಣಿತವಾಗಿರುವುದು. ಶ್ರೀರಾಮಕೃಷ್ಣರ ಸಂವಹನ ಕೌಶಲ್ಯ ವ್ಯಕ್ತಿಗಳ ಸಾಧನೆಯ ಘಟ್ಟವನ್ನು, ಪರಿಸ್ಥಿತಿಯನ್ನು ಅವಲಂಬಿಸಿ ಬದಲಾಗುತ್ತಿದ್ದು, ಗುಂಪಿನಲ್ಲಿಯೂ ಉದ್ದೇಶಿತ ವ್ಯಕ್ತಿಗೆ ಮಾತ್ರ ಸೀಮಿತವಾಗುವಂತೆ ಮಾತನಾಡಬಲ್ಲವರಾಗಿದ್ದರು. ಹಾಡುಗಳಿಂದ, ತಮ್ಮ ಭಾವಾವಸ್ಥೆಗಳಿಂದ, ಅನುಕರಣೆಯ ನಟನೆಗಳಿಂದ ಅವರು ಆಂತರಿಕ ಅರ್ಥಗಳನ್ನು ಮನದಟ್ಟು ಮಾಡುತ್ತಿದ್ದರು.

## ಶ್ರೀರಾಮಕೃಷ್ಣರ ಸಂವಹನದ ಮಾದರಿಗಳು

ಜಗನ್ಮಾತೆಯ ಸಾಕ್ಷಾತ್ಕಾರದ ಅನಂತರ ಶ್ರೀರಾಮಕೃಷ್ಣರು ದಿವ್ಯೋನ್ಮಾದದಲ್ಲಿಯೆ ಇರುತ್ತಿದ್ದರು. ಅವರು ಹಾಡುವುದನ್ನು ಕೇಳಲು ಇಷ್ಟಪಡುತ್ತಿದ್ದ ರಾಣಿ ರಾಸಮಣಿ ಒಮ್ಮೆ ಅವರಿಂದ ಹಾಡಿಸಿ, ಅನ್ಯಮನಸ್ಕಳಾದಳು. ಆಗ ''ಇಲ್ಲೂ ಅದೇ ಯೋಚನೆಯೇ! ಛೀ!'' ಎನ್ನುತ್ತ ಶ್ರೀರಾಮಕೃಷ್ಣರು ರಾಣಿಯ ಕಪಾಳಕ್ಕೆ ಹೊಡೆದರು. ಅತ್ಯಂತ ಶುದ್ಧ ಸ್ವಭಾವದಿಂದಿದ್ದ ರಾಣಿಗೆ ಅವರ ಒರಟು ನಡವಳಿಕೆ ಅರ್ಥವಾಯಿತು. ಖಟ್ಲೆಯ ಬಗ್ಗೆ ತಾನು ಯೋಚಿಸುತ್ತಿದ್ದುದು ಇವರಿಗೆ ಹೇಗೆ ಗೊತ್ತಾಯಿತು ಎಂದು ಆಶ್ಚರ್ಯಪಡುತ್ತ, ದೇವಸ್ಥಾನದ ನೌಕರರಿಗೆ ತರುಣ ಪೂಜಾರಿಯದು ತಪ್ಪಿಲ್ಲ, ಅವನ ಮೇಲೆ ಯಾವ ಕ್ರಮವನ್ನೂ ಜರುಗಿಸಬೇಡಿ ಎಂದು ಆಜ್ಞಾಪಿಸಿದಳು. *(ದೇವರೊಡನೆ ಬಾಳಿದವರು ಭಾಗ ೨, ಪು.೩೦)*

* * * *

ರಾಮಚಂದ್ರ ದತ್ತನ ಸಂದೇಹ ಪ್ರಕೃತಿ ಪುನಃ ತಲೆಯೆತ್ತಿತು; ಮೊದಲಿದ್ದ ಸಂದೇಹಗಳೆಲ್ಲ ಪುನಃ ಜೀವ ತಳೆದವು. ಪರಿಣಾಮವಾಗಿ ಅವನ ಮನಸ್ಸು ಅಶಾಂತವಾಯಿತು; ದುಃಖ ಹೇಳತೀರದಾಯಿತು. ಲೋಕವೇ ಒಂದು ಮರಳುಗಾಡಿನಂತೆ ಕಾಣತೊಡಗಿತು. ತನ್ನ ಗೋಳಿನ ಕಥೆಯನ್ನು ಎಂದಿನಂತೆ ಹೇಳಿಕೊಂಡು ಸಾಂತ್ವನ ಪಡೆಯಲೆಂದು ಅವನು ಶ್ರೀರಾಮಕೃಷ್ಣರ ಬಳಿಗೆ ಬಂದನು. ಆದರೆ ಈ ಸಲ ಶ್ರೀರಾಮಕೃಷ್ಣರು ಮೊಟಕಾಗಿ, 'ನಾನೇನು ಮಾಡಲಿ? ಎಲ್ಲವೂ ಭಗವಂತನ ಇಚ್ಛೆಯಂತೆಯೇ ನಡೆಯುವುದು' ಎಂದುಬಿಟ್ಟರು.

**ರಾಮು:** ಸ್ವಾಮಿ. ಇಷ್ಟು ದಿನವೂ ಸಹಾಯಕ್ಕಾಗಿ ನಾನು ನಿಮ್ಮನ್ನೇ ಅವಲಂಬಿಸಿಕೊಂಡು ಬಂದಿರುವೆ. ಈಗ ನೀವು ಹೀಗೆ ಅಂದುಬಿಟ್ಟರೆ ಹೇಗೆ? ನಾನೇನು ಮಾಡಲಿ?

**ಶ್ರೀರಾಮಕೃಷ್ಣರು:** ನನಗೆ ನಿನ್ನ ಬಾಧ್ಯತೆ ಯಾವುದೂ ಇಲ್ಲ. ನಿನಗೆ ಬೇಕೆನಿಸಿದರೆ ಬರಬಹುದು, ಬೇಡವೆನಿಸಿದರೆ ಬಿಡಬಹುದು.

ಶ್ರೀರಾಮಕೃಷ್ಣರು ಕೊಟ್ಟ ಈ ಆಘಾತವು ರಾಮನನ್ನು ದುಃಖದ ಮಡುವಿನೊಳಕ್ಕೆ ನೂಕಿತು. *(ಅಲ್ಲೇ, ಪು.೧೦೫)*

* * * *

**ಶ್ರೀರಾಮಕೃಷ್ಣರು:** ಇಲ್ಲಿ ನೀರಿನಿಂದ ತುಂಬಿದ ಹತ್ತು ಘಟಗಳಿವೆ, ಅವುಗಳಲ್ಲೆಲ್ಲಾ ಸೂರ್ಯನ ಬಿಂಬ ಬಿದ್ದಿದೆ ಅಂತ ಭಾವಿಸಿಕೊಳ್ಳಿ. ಆಗ ನಾವು ಎಷ್ಟು ಸೂರ್ಯರನ್ನು ನೋಡಬಹುದು?

**ಒಬ್ಬ ಭಕ್ತ:** ಹತ್ತು ಪ್ರತಿಬಿಂಬಗಳು. ಜೊತೆಗೆ ನಿಜವಾದ ಸೂರ್ಯ ಇದ್ದೇ ಇದ್ದಾನೆ.

**ಶ್ರೀರಾಮಕೃಷ್ಣರು:** ನೀನು ಒಂದು ಘಟವನ್ನು ಒಡೆದು ಹಾಕಿದೆ ಅಂತ ಇಟ್ಟುಕೊ. ಆಗ ಉಳಿದುಕೊಳ್ಳುವ ಸೂರ್ಯರೆಷ್ಟು?

**ಭಕ್ತ:** ಒಂಬತ್ತು ಪ್ರತಿಬಿಂಬಗಳು. ಆದರೆ ನಿಜವಾದ ಸೂರ್ಯ ಇದ್ದೇ ಇದ್ದಾನೆ.

**ಶ್ರೀರಾಮಕೃಷ್ಣರು:** ಒಳ್ಳೇದು. ಒಂಬತ್ತು ಘಟಗಳನ್ನೂ ಒಡೆದುಹಾಕಿಬಿಟ್ಟೆ ಅಂತ ಇಟ್ಟುಕೊ. ಆಗ ಉಳಿದುಕೊಳ್ಳುವ ಸೂರ್ಯರೆಷ್ಟು?

**ಭಕ್ತ:** ಒಂದು ಪ್ರತಿಬಿಂಬ. ನಿಜವಾದ ಸೂರ್ಯನೊಬ್ಬ ಇದ್ದೇ ಇದ್ದಾನೆ.

**ಶ್ರೀರಾಮಕೃಷ್ಣರು** (ಗಿರೀಶನಿಗೆ): ಆ ಕೊನೇ ಘಟವನ್ನೂ ಒಡೆದುಹಾಕಿದ ಮೇಲೆ ಉಳಿದುಕೊಳ್ಳುವುದೇನು?

**ಗಿರೀಶ:** ನಿಜವಾದ ಸೂರ್ಯ ಮಾತ್ರ.

**ಶ್ರೀರಾಮಕೃಷ್ಣರು:** ಅದು ಸರಿಯಲ್ಲ. ಏನು ಉಳಿದುಕೊಳ್ಳುತ್ತದೆಯೋ ಅದನ್ನು ಬಾಯಿಯಿಂದ ವರ್ಣಿಸಲಾಗುವುದಿಲ್ಲ. ಏನಿದೆಯೋ ಅದೇ ಇರುತ್ತದೆ. ಸೂರ್ಯನ ಪ್ರತಿಬಿಂಬ ಇಲ್ಲದೆ ಇದ್ದರೆ, ನಿಜವಾದ ಸೂರ್ಯನೊಬ್ಬನಿದ್ದಾನೆ ಎಂಬುದನ್ನು ಅರಿಯುವ ಬಗೆ ಹೇಗೆ? ಸಮಾಧಿ ದೊರೆತಾಗ ಅಹಂತತ್ತ್ವ ನಾಶವಾಗಿ ಬಿಡುತ್ತದೆ. ಸಮಾಧಿಸ್ಥ ವ್ಯಕ್ತಿ ಈ ಬಾಹ್ಯ ಜಗತ್ತಿನ ಅಂತಸ್ತಿಗೆ ಇಳಿದು ಬಂದಾಗ, ಸಮಾಧಿಯಲ್ಲಿ ಏನು ನೋಡಿದೆ ಎಂಬುದನ್ನು ಆತ ಬಾಯಿಂದ ವರ್ಣಿಸಲಾರ.

* * * *

## ಶ್ರೀರಾಮಕೃಷ್ಣರ ಸಂವಹನದ ವೈಶಿಷ್ಟ್ಯಗಳು

ಶ್ರೀರಾಮಕೃಷ್ಣರು ವ್ಯಕ್ತಿಯ ಕಣ್ಣು, ಶರೀರ ಲಕ್ಷಣಗಳನ್ನು ನೋಡಿದೊಡನೆಯೆ ಆತನ ಸಂಸ್ಕಾರದ ಬಗೆಗೆ ತಿಳಿಯಬಲ್ಲವರಾಗಿದ್ದರು. ಇತರರ ಮನಸ್ಸನ್ನು ಓದಬಲ್ಲವರಾಗಿದ್ದರಲ್ಲದೆ, ಮುಂಗಾಣ್ಕೆಯೂ ಅವರಿಗಿತ್ತು. ದೃಷ್ಟಾಂತ ಕತೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಮನಗಾಣಿಸುವಲ್ಲಿ ಅವರ ಪ್ರತಿಭೆ ಅಸದೃಶ. ಅವರಿಗೆ ಸಂಸ್ಕೃತ ಅರ್ಥವಾಗುತ್ತಿತ್ತು. ಹಿಂದಿಯಲ್ಲಿ ಸೊಗಸಾಗಿ ಮಾತನಾಡಬಲ್ಲರು. ತಮಗೆ ತಿಳಿದಿದ್ದ ಇಂಗ್ಲಿಷ್ ಪದಗಳನ್ನು ಉಪಯೋಗಿಸಿದಾಗ ಇತರರಲ್ಲಿ ನಗು ಹುಟ್ಟಿಸಿದರೂ, ಸಂದರ್ಭಕ್ಕೆ ತಕ್ಕಂತೆ ಬಳಸುವರು. ದೇವದುರ್ಲಭ ಕಂಠ

ದಿಂದ ಸನ್ನಿವೇಶಕ್ಕೆ ಹೊಂದುವ ಗೀತೆಗಳನ್ನು ಹಾಡಿ, ಅರ್ಥ ಮಾಡಿಕೊಳ್ಳಬಲ್ಲ ವಾತಾವರಣವನ್ನು ಸೃಷ್ಟಿಸುತ್ತಿದ್ದರು. ಅನುಕರಣೆಯ ಕಲೆ ಅವರಿಗೆ ಜನ್ಮಜಾತವಾಗಿತ್ತು. ಹೀಗಾಗಿ, ಸಾಮಾನ್ಯವಾಗಿ ಸಂತರುಗಳ ಗಾಂಭೀರ್ಯ ಅವರದ್ದಾಗಿರದೆ, ಅವರೇ ಹೇಳಿಕೊಳ್ಳುತ್ತಿದ್ದಂತೆ ಮತ್ತು ಇತರರು ಕಾಣುವಂತೆ ಬಾಲಕನ ಸ್ವಭಾವದಿಂದ ಕೂಡಿದ್ದು, ಅವರು ಇದ್ದೆಡೆ ಉಲ್ಲಾಸದ ವಾತಾವರಣ, ನಗು, ಭಕ್ತಿಯ ಭಾವ ಜಾಗೃತಿ ಉಂಟಾಗುತ್ತಿತ್ತು. ನಾನು ಒಂದೇ ಸ್ವರವನ್ನು ಹಾಡುವುದನ್ನು ಇಷ್ಟಪಡುವುದಿಲ್ಲ, ನನಗೆ ಎಲ್ಲ ರಾಗಗಳೂ ಇಷ್ಟ. ಎನ್ನುವರು. ಭಗವತಿಯೇ ಅವರನ್ನು 'ಭಾವಮುಖದಲ್ಲಿ ಇರು' ಎಂಬುದಾಗಿ ಆಜ್ಞಾಪಿಸಿದ್ದಳು.

ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಸಮಾಜದ ವಿಚಾರವಂತರನ್ನು, ಭಗವದ್ಭಕ್ತರುಗಳನ್ನು ಪರಮಹಂಸರು ಭೇಟಿಮಾಡುತ್ತಿದ್ದರು. ಸಾಮಾನ್ಯವಾಗಿ ಪರಸ್ಪರ ಮೆಚ್ಚುಗೆ ವ್ಯಕ್ತವಾಗುತ್ತಿದ್ದರೂ, ತಮಗೆ ಸರಿತೋರದ ಮಾತುಗಳನ್ನು ಅವರು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಿದ್ದರು. ಪ್ರಖ್ಯಾತ ಕಾದಂಬರಿಕಾರ ಬಂಕಿಮಚಂದ್ರ ಚಟರ್ಜಿಯ ಭೇಟಿಯನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು:

**ಶ್ರೀರಾಮಕೃಷ್ಣರು:** ''ಒಳ್ಳೇದು, ನೀನು ಏನು ಹೇಳುತ್ತೀಯೆ? ಮನುಷ್ಯನ ಕರ್ತವ್ಯ ಏನು?''

**ಬಂಕಿಮ** (ನಗುತ್ತ ನಗುತ್ತ): ''ಅದರ ಸಂಬಂಧವಾಗಿ ಹೇಳಬೇಕೆಂದರೆ ನನಗನಿಸುತ್ತದೆ, ಆಹಾರ ನಿದ್ರೆ ಮೈಥುನ ಅಂತ.''

**ಶ್ರೀರಾಮಕೃಷ್ಣರು** (ಸಿಟ್ಟುಗೊಂಡು): ''ಛೀ! ನಿನಗೆ ನಾಚಿಕೆ ಹೇಸಿಗೆ ಅನ್ನುವುದು ಏನೂ ಇಲ್ಲ! ನೀನು ಹಗಲೂ ರಾತ್ರಿ ಏನು ಏನು ಮಾಡುತ್ತಿದ್ದೀಯೋ ಅದೇ ನಿನ್ನ ಬಾಯಿಂದ ಹೊರಬೀಳುತ್ತದೆ. ಜನ ಏನು ತಿನ್ನುತ್ತಾರೋ ಅದನ್ನೇ ತೇಗುತ್ತಾರೆ... ಹಗಲೂ ಇರುಳೂ ನೀನು ಕಾಮಕಾಂಚನದ ಮಧ್ಯೆ ಬಿದ್ದಿದ್ದೀಯೆ: ಅದಕ್ಕಾಗಿಯೇ ನಿನ್ನ ಬಾಯಿಯಿಂದ ಈ ವಿಧವಾದ ಮಾತುಗಳು ಹೊರಬರುತ್ತಿವೆ. ಕೇವಲ ವಿಷಯಚಿಂತನೆಯಲ್ಲಿಯೇ ಮುಳುಗಿಹೋಗಿದ್ದರೆ ಲೆಕ್ಕಾಚಾರದ ಸ್ವಭಾವ ಬಂದುಬಿಡುತ್ತದೆ. ಮನುಷ್ಯ ಕಪಟಿಯಾಗಿಬಿಡುತ್ತಾನೆ. ಭಗವಚ್ಚಿಂತನೆ ಮಾಡಿದರೆ ಸರಳನಾಗುತ್ತಾನೆ... ಬರೀ ಪಾಂಡಿತ್ಯದಿಂದ ಏನಾಗುತ್ತದೆ?

''ರಣಹದ್ದು ಬಹಳ ಎತ್ತರಕ್ಕೇನೋ ಹಾರಿಹೋಗುತ್ತದೆ. ಆದರೆ ಅದರ ದೃಷ್ಟಿಯೆಲ್ಲ ಕೇವಲ ಹೆಣದ ಗುಂಡಿಗಳ ಕಡೆಗೆ. ಪಂಡಿತ ಅನ್ನಿಸಿಕೊಳ್ಳೋನು ಅನೇಕ ಪುಸ್ತಕ ಶಾಸ್ತ್ರ ಓದಿರುತ್ತಾನೆ. ಶ್ಲೋಕ ಎತ್ತಿ ಹೇಳಬಲ್ಲ. ಅನೇಕ ಪುಸ್ತಕಗಳನ್ನು ಬರೆದಿರಬಹುದು. ಆದರೆ ಆತ ಸ್ತ್ರೀಲೋಲನಾಗಿ ಹೆಸರು, ಕೀರ್ತಿ ಧನಕಾದಿಗಳೇ ಸಾರವಸ್ತು ಅಂತ ಭಾವಿಸುತ್ತಿದ್ದರೆ ಆತ ಹೇಗೆ ಪಂಡಿತನಾಗಬಲ್ಲ? ಭಗವಂತನಲ್ಲಿ ಮನಸ್ಸು ನೆಲೆಸದಿದ್ದರೆ ಆತ ಪಂಡಿತನಾಗಬಲ್ಲನೆ?''

ಆಮೇಲೆ ದಯಾರ್ದ್ರಹೃದಯದಿಂದ ''ಮನಸ್ಸಿಗೇನೂ ತಿಳಿದುಕೊಳ್ಳಬೇಡ'' ಎಂದು ಸಮಾಧಾನಿಸುತ್ತಾರೆ. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪುಟ ೧೬೯)*

ಶಾಸ್ತ್ರಗಳನ್ನು ಓದಲಿಲ್ಲವಲ್ಲ ಅಂತ ಒಂದು ಕಿಂಚಿತ್ತೂ ದುಃಖವಾಗುತ್ತಿಲ್ಲ ಎಂದು ಮಣಿಮಲ್ಲಿಕನಿಗೆ ಹೇಳುವ ಅವರು, ಹೀಗೆನ್ನುತ್ತಾರೆ: ''ಶಾಸ್ತ್ರದ ಸಾರವನ್ನು ಗುರುಮುಖೇನ ಕೇಳಿ ತಿಳಿದುಕೊಳ್ಳಬೇಕು. ಬಳಿಕ ಸಾಧನೆ ಭಜನೆಯಲ್ಲಿ ತೊಡಗಬೇಕು. ಒಬ್ಬ ಇನ್ನೊಬ್ಬನಿಗೆ ಒಂದು ಪತ್ರ ಬರೆದಿದ್ದ. ಅದನ್ನು ಓದುವುದಕ್ಕೆ ಮುನ್ನವೇ ಅದು ಎಲ್ಲೋ ಬಿದ್ದುಹೋಗಿತ್ತು. ಆಗ ಎಲ್ಲರೂ ಕೂಡಿ ಹುಡುಕಲಾರಂಭಿಸಿದರು. ಯಾವಾಗ ಆ ಪತ್ರ ಮತ್ತೆ ಸಿಕ್ಕಿತೋ ಆಗ ಅದನ್ನು ಓದಿ ನೋಡಿದಾಗ ಅದರಲ್ಲಿ ಬರೆದಿತ್ತು: ಐದು ಸೇರು ಮಿಠಾಯಿ ಮತ್ತು ಒಂದು ಪಂಚೆಯನ್ನು ಕೊಂಡು ಕಳುಹಿಸು ಅಂತ. ಬಳಿಕ ಆ ಪತ್ರವನ್ನು ಬಿಸಾಡಿ ಐದು ಸೇರು ಮಿಠಾಯಿ ಮತ್ತು ಒಂದು ಪಂಚೆಯನ್ನು ಕೊಂಡುಕೊಳ್ಳಲು ಆತ ಹೊರಟ.'' *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪುಟ೨೦೫)*

ಬರಹಕ್ಕೂ ಮಾತಿಗೂ ಇರುವ ವ್ಯತ್ಯಾಸ ಅವರಿಗೆ ಗೊತ್ತು. ಗೀತೆ ಶ್ರೀಕೃಷ್ಣನ ಉಕ್ತಿಗಳನ್ನು ಒಳಗೊಂಡಿದೆ ಎನ್ನುವ ಭಕ್ತನೊಬ್ಬನ ಮಾತಿಗೆ ನರೇಂದ್ರ, ಶ್ರೀಕೃಷ್ಣನದನ್ನೋ ಅಥವಾ ಬೇರೆ ಯಾರದನ್ನೊ! ಎಂದು ಪ್ರತಿಕ್ರಿಯಿಸುತ್ತಾನೆ. ಆಗ ಆಶ್ಚರ್ಯಚಕಿತರಾದ ಶ್ರೀರಾಮಕೃಷ್ಣರ ಮಾತಿದು: ''ಈ ವಿಧವಾದ ಚರ್ಚೆ ಬಹಳ ಒಳ್ಳೆಯದು. ಶಾಸ್ತ್ರಗಳಿಗೆ ಎರಡು ವಿಧವಾದ ಅರ್ಥಗಳಿವೆ: ಶಬ್ದಾರ್ಥ ಮತ್ತು ಮರ್ಮಾರ್ಥ. ನಾವು ಮರ್ಮಾರ್ಥವನ್ನು ಎಂದರೆ ಭಗವದುಕ್ತಿಗಳೊಡನೆ ತಾಳೆಯಾಗುವುದನ್ನು ಸ್ವೀಕರಿಸಬೇಕು. ಏನನ್ನೇ ಆಗಲಿ ಬರವಣಿಗೆಯ ಮೂಲಕ ವ್ಯಕ್ತಪಡಿಸುವುದಕ್ಕೂ, ಬಾಯಿಂದ ನೇರವಾಗಿ ಹೇಳುವುದಕ್ಕೂ ಬಹಳ ವ್ಯತ್ಯಾಸವಿದೆ. ಶಾಸ್ತ್ರಗಳು ಬರವಣಿಗೆ ಮೂಲಕ ವ್ಯಕ್ತವಾದ ಮಾತು. ಭಗವದ್ವಾಣಿ ನೇರವಾಗಿ ಭಗವನ್ಮುಖದಿಂದ ಬಂದ ಮಾತು. ಭಗವತಿಯ ಉಕ್ತಿಗಳೊಡನೆ ತಾಳೆಯಾಗದ ಯಾವುದನ್ನೂ ನಾನು ಸ್ವೀಕರಿಸುವುದಿಲ್ಲ. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪುಟ ೩೨೪)*

ತಮ್ಮ ಮಾತನ್ನು ಅಪಾರ್ಥ ಮಾಡಿದಾಗ ಶ್ರೀರಾಮಕೃಷ್ಣರ ಪ್ರತಿಕ್ರಿಯೆ ಕುತೂಹಲಕರ. ಅವರ ಎದುರಿಗೆ ಬ್ರಾಹ್ಮಸಮಾಜದ ತ್ರೈಲೋಕ್ಯನಾಥ ಸನ್ಯಾಲನಿಗೆ ಗಿರೀಶ ಕೇಳುತ್ತಾನೆ, ''ಪರಮಹಂಸರು ಕೇಶವಚಂದ್ರಸೇನನೊಡನೆ ಪರಿಚಯ ಮಾಡಿಕೊಂಡ ನಂತರ ಸಂಸಾರ ಸಂಬಂಧವಾಗಿ ಅವರಿಗಿದ್ದ ಭಾವನೆ ಪರಿವರ್ತನೆ ಹೊಂದಿತು ಎಂಬುದಾಗಿ ನೀನು ಕೇಶವಚಂದ್ರಸೇನನ ಜೀವನ ಚರಿತ್ರೆಯಲ್ಲಿ ಬರೆದಿದ್ದೀಯೆ; ಆದರೆ ಅದು ಸತ್ಯವಾದುದಲ್ಲ.''

**ತ್ರೈಲೋಕ್ಯ:** ''ಯಾರು ಸಂಸಾರಿಗಳಾಗಬೇಕೆಂದು ಇಚ್ಛೆಪಡುತ್ತಾರೊ ಅವರಿಗಾಗಿ ನಾನು ಹಾಗೆ ಬರೆದಿರುವುದು; ಅದು

ತ್ಯಾಗಿಗಳಿಗೆ ಸಂಬಂಧಪಟ್ಟುದುದಲ್ಲ.''

**ಶ್ರೀರಾಮಕೃಷ್ಣರು:** ನೀನು ಏನು ಮಾತನಾಡುವುದು? ಸಂಸಾರದಲ್ಲಿ ಇದ್ದುಕೊಂಡು ಆಧ್ಯಾತ್ಮಿಕ ಉನ್ನತಿ ಪಡೆಯ ಬಹುದು ಅಂತ ಯಾರು ಹೇಳುತ್ತಿದ್ದಾರೆ? ಅವರಿಗೇನಾದರೂ ಒಮ್ಮೆ ಭಗವದಾನಂದ ದೊರೆತುದೇ ಆದರೆ, ಬಳಿಕ ಅವರಿಗೆ ಅದರ ವಿನಾ ಬೇರೆ ಏನೂ ರುಚಿಸದು. ಅವರ ಸಾಂಸಾರಿಕ ಕೆಲಸ ಕಾರ್ಯಗಳ ಮೇಲಿನ ಆಸಕ್ತಿ ಕಡಿಮೆಯಾಗುತ್ತ ಬರಲಾರಂಭಿಸು ತ್ತದೆ. ಕ್ರಮೇಣ ಅವರ ಭಗವದಾನಂದ ಆ ರೀತಿಯಾಗಿ ವೃದ್ಧಿ ವೃದ್ಧಿಯಾಗುತ್ತಾ ಬರುತ್ತದೆ....'' ನಾವು ಗಮನಿಸಬೇಕಾದುದು, ಬೇರೆ ಭಕ್ತರುಗಳಂತೆ ತ್ರೈಲೋಕ್ಯನನ್ನು ಶ್ರೀರಾಮಕೃಷ್ಣರು ವಿಮ ರ್ಶಿಸುತ್ತಿಲ್ಲ, ಬದಲಾಗಿ, ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿ ಸುತ್ತ ಹೋಗುತ್ತಾರೆ. ತಪ್ಪು ಮಾಡಿದವನನ್ನು ತರಾಟೆಗೆ ತೆಗೆದು ಕೊಳ್ಳುವ ಭಾವ ಅವರಿಗಿಲ್ಲ.

### ಶ್ರೀರಾಮಕೃಷ್ಣರಿಗೆ ಸಂವಹನ ಸಾಧ್ಯವಾಗದೆ ಹೋದ ಪ್ರಸಂಗ

ಒಂದು ದಿನ ಅವರು ದೃಢವಾಗಿ ಹೇಳಿದರು, ''ಇಂದು ನಿಮಗೆ ಎಲ್ಲ ಹೇಳಿಬಿಡುತ್ತೇನೆ, ಏನನ್ನೂ ಬಚ್ಚಿಡುವುದಿಲ್ಲ'' ಎಂದು. ಹೃದಯ ಮತ್ತು ಕಂಠದವರೆಗೆ ಎಲ್ಲ ಚಕ್ರಗಳ ಬಗ್ಗೆ ಹೇಳಿದನಂತರ ಭ್ರೂಮಧ್ಯವನ್ನು ತೋರಿಸಿ ಹೇಳಿದರು, ''ಮನಸ್ಸು ಇಲ್ಲಿಗೆ ಏರಿದರೆ ಪರಮಾತ್ಮನ ದರ್ಶನವಾಗುವುದು, ಜೀವನು ಸಮಾಧಿಯನ್ನು ಪಡೆಯುವನು. ಆಗ ಪರಮಾತ್ಮ ಮತ್ತು ಜೀವಾತ್ಮರ ನಡುವೆ ಒಂದು ಪಾರದರ್ಶಕ ತೆರೆ ಉಳಿಯು ತ್ತದೆ. ಆಗ ಅವನು ಹೀಗೆ ನೋಡುತ್ತಾನೆ —'' ಹೀಗೆ ಹೇಳಿ ಪರಮಾತ್ಮನ ದರ್ಶನದ ಬಗ್ಗೆ ಹೇಳಲು ಪ್ರಾರಂಭಿಸುತ್ತಿದ್ದಂ ತೆಯೇ ಸಮಾಧಿಸ್ಥರಾಗಿಬಿಟ್ಟರು. ಸಮಾಧಿ ಭಂಗವಾದಮೇಲೆ ಮತ್ತೆ ಹೇಳಲು ಉಪಕ್ರಮಿಸಿದರು. ಮತ್ತೆ ಸಮಾಧಿಸ್ಥರಾದರು. ಹೀಗೆ ಅನೇಕ ಬಾರಿ ಆಗಲು, ಅವರು ಕಣ್ಣೀರು ಸುರಿಸುತ್ತ ಹೇಳಿ ದರು, ''ನೋಡಿ, ಎಲ್ಲ ಹೇಳಿಬಿಡಬೇಕು, ಏನನ್ನೂ ಬಚ್ಚಿಟ್ಟು ಕೊಳ್ಳಬಾರದು ಎಂದು ಮನಸ್ಸು ಮಾಡುತ್ತೇನೆ. ಆದರೆ ತಾಯಿ ಹೇಳಲು ಬಿಡುವುದಿಲ್ಲ. ಬಾಯಿ ಮುಚ್ಚಿಬಿಡುತ್ತಾಳೆ...'' ಹಾಗಾ ದರೆ ಇದರ ಅರ್ಥ ಹೀಗಿರಬಹುದೆ? ಮಾತುಕತೆ ನಡೆಯುವುದು ಮನಸ್ಸು ಬುದ್ಧಿಗಳ ಸಹಾಯದಿಂದ. ಅವು ಬಹುದೂರ ಹೋಗು ವುದಿಲ್ಲ. ಅವು ಎಷ್ಟುದೂರ ಹೋಗುವುವೋ ಅದನ್ನೂ ಮೀರಿ ಮುಂದೆ ಹೋಗದೆ ಪರಮಾತ್ಮನ ಪೂರ್ಣದರ್ಶನ ಸಾಧ್ಯವಿಲ್ಲ. ಆದ್ದರಿಂದ ಶ್ರೀರಾಮಕೃಷ್ಣರು ನಮ್ಮ ಮೇಲಿನ ಪ್ರೀತಿಯಿಂದ ಅಸಾಧ್ಯವಾದುದನ್ನು ಸಾಧ್ಯಗೊಳಿಸಲು ಪ್ರಯತ್ನಿಸುತ್ತಿರುವರೆ? *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪು.೪೦೫)*

ಆದರೆ ಅವರು ಇತರರಿಗೆ ಸ್ಪರ್ಶಮಾತ್ರದಿಂದ ಆಧ್ಯಾತ್ಮಿಕ ಅನುಭವ ಉಂಟಾಗುವಂತೆ ಮಾಡುತ್ತಿದ್ದ ಅನೇಕ ಪ್ರಸಂಗ ಗಳನ್ನು ನಾವು ಕಾಣುತ್ತೇವೆ.

### ಶ್ರೀರಾಮಕೃಷ್ಣರ ಸಂವಹನ: ಉಪನಿಷತ್ತುಗಳ ಸಾಮ್ಯ

ಈ ಅನುಭವದ ಬಗ್ಗೆ ಅವರು ಹೇಳುತ್ತಿದ್ದ ಉಪ್ಪಿನ ಬೊಂಬೆ ಸಮುದ್ರವನ್ನು ಅಳೆಯಲು ಹೋದ ದೃಷ್ಟಾಂತ ಕತೆ ಪ್ರಸಿದ್ಧ. ಬೊಂಬೆ ಕರಗಿ ಹೋಯಿತು. ಈಗ ಸಮುದ್ರದ ಆಳವನ್ನು ತಿಳಿ ಸುವವರಾರು? ಆಧ್ಯಾತ್ಮಿಕ ವ್ಯಕ್ತಿ ತಮ್ಮ ಅನುಭವಗಳನ್ನು ಮಾತಿನ ಮೂಲಕ ವಿವರಿಸುವಾಗ ಇಂತಹ ವಿಶೇಷ ಪ್ರಯೋಗಗಳ ಅಗತ್ಯವಿದೆ. ಉಪನಿಷತ್ತುಗಳು ಇದನ್ನು ಕಾವ್ಯಾತ್ಮಕವಾಗಿ ಹೇಳಲು ಪ್ರಯತ್ನಿಸುತ್ತವೆ. ಕೇನೋಪನಿಷತ್ ಈ ಅನುಭೂತಿ ಮಿಂಚಿನ ಹಾಗೆ ಎನ್ನುತ್ತದೆ. ಇಂದ್ರಿಯಾನುಭವವನ್ನು ಮಾತಿನ ಮೂಲಕ ಹೇಳಲು ಆಗದು. ಭಾಷೆಗೆ ಇರುವ ಸಾಧ್ಯತೆಗಳನ್ನು ವ್ಯವಹಾರದ ಮೂಲಕ ಅಭಿವ್ಯಕ್ತಿಸಲು ಸಾಧ್ಯ. ಎಲ್ಲ ಅನುಭವ ಇಂದ್ರಿಯಾ ಧಾರಿತವಾಗಿದ್ದು, ಪ್ರತ್ಯಕ್ಷ ಅನುಮಾನ ಅಲ್ಲಿ ಸಾಧ್ಯ. ಇದನ್ನು ಮೀರಿದ ತುರೀಯ ಅನುಭವ ಅನಿರ್ವಚನೀಯ. ವೇದಾಂತ ದಲ್ಲಿ ಪ್ರತ್ಯಕ್ಷ, ಅನುಮಾನಗಳನ್ನು ತಿರಸ್ಕರಿಸಿ, ಶ್ರುತಿ ಅಥವಾ ಶಬ್ದ ಪ್ರಮಾಣವನ್ನು ಪರಿಗಣಿಸುತ್ತಾರೆ. ಈ 'ಶಬ್ದ'ವೂ ವಿರುದ್ಧವಾದ ಉಕ್ತಿಗಳಿಂದ ಕೂಡಿವೆ: 'ತದೇಜತಿ ತನ್ನೇಜತಿ ತದ್ದೂರೇ ತದ್ವಂತಿಕೇ', 'ಅಣೋರಣೀಯಾನ್ ಮಹತೋ ಮಹೀಯಾನ್' ಇಂತಹ ಹೇಳಿಕೆಗಳನ್ನು ಗಮನಿಸಬಹುದು.

ಋಷಿಗಳ ಅನುಭವವೇ ವೇದ. ವೇದ ಪರಾವಿದ್ಯೆ. ದ್ರಷ್ಟಾರ ರಾದ ಅವರು ತಮ್ಮ ಅನುಭವದ ಆಧಾರದ ಮೇಲೆ ಕಂಡ ಸತ್ಯ ವನ್ನು ಮಂತ್ರರೂಪದಲ್ಲಿ ಹೇಳುತ್ತಾರೆ. ಜಾಗ್ರತ್ತನ್ನು ಬಿಟ್ಟರೆ ಉಳಿದ ಅವಸ್ಥೆಗಳಾದ ಸ್ವಪ್ನ, ಸುಷುಪ್ತಿ, ತುರೀಯಗಳಲ್ಲಿ ಮನಸ್ಸು ಇಲ್ಲ ದ್ದರಿಂದ ಇಂದ್ರಿಯಗಳು ಕೆಲಸ ಮಾಡುವುದಿಲ್ಲ. ಅಲ್ಲಿ ಮನಸ್ಸು ಇದ್ದರೂ ಇಲ್ಲದಂತಿದೆ. ಬ್ರಹ್ಮ ಸಾಕ್ಷಾತ್ಕಾರದ ವಿಶೇಷ ಗ್ರಹಿಕೆ ಯಲ್ಲಿ ಮನಸ್ಸಿರಲಿ, ಪ್ರಾಣವೂ ಕೆಲಸ ಮಾಡುವುದಿಲ್ಲ. ವಿಶ್ವ ರೂಪದರ್ಶನಕ್ಕೆ ದಿವ್ಯ ಚಕ್ಷುಸ್ಸು ಬೇಕು; ಸಾಧನೆಯ ಮೂಲಕ ಪಡೆಯಬೇಕು; ಆಗ ಗ್ರಹಿಸಲು ಸಾಧ್ಯ – ಆದರೆ ವಿವರಿಸಲು ಅಸಾಧ್ಯ. ತತ್ತ್ವಮೀಮಾಂಸೆಯಲ್ಲಿ ಇದನ್ನು ಅತೀಂದ್ರಿಯ ಪ್ರಜ್ಞೆ ಎನ್ನುವರು. ಕಲ್ಪನೆಯೊಡಗೂಡಿದ ಅನುಭವವನ್ನು ಕವಿಗಳು ವಕ್ರೋಕ್ತಿಯ ಮೂಲಕ ಕಾವ್ಯದಲ್ಲಿ ವಿವರಿಸುವರು. ಅತೀಂ ದ್ರಿಯ ಅನುಭವವನ್ನು ವಿವರಿಸಲು ಇದನ್ನೂ ಮೀರಿ ಹೋಗುವ ಅನಿವಾರ್ಯತೆ ಇದೆ. ಶ್ರೀರಾಮಕೃಷ್ಣರ ದೃಷ್ಟಾಂತ ಕತೆಯಲ್ಲಿ ಎತ್ತರವಾದ ಗೋಡೆಗಳಿಂದ ಆವೃತವಾದ ಜಾಗದಿಂದ ಕೇಳಿಬರು ತ್ತಿದ್ದ ಮಧುರವಾದ ಗಾನವನ್ನು ಕೇಳಿ ಒಳಗೇನಿದೆ ಎಂದು ಇಬ್ಬರು ಗೋಡೆಯೇರಿ ನೋಡಿ, 'ಆಹಾ' ಎಂದು ಒಳಗೆ ಹಾರಿ ಬಿಡುತ್ತಾರೆ. ಮೂರನೆಯವನು ಆ ಆನಂದದ ಮೇಳದಲ್ಲಿ ಭಾಗಿ ಯಾಗುವ ಆಸೆಯನ್ನು ತಡೆದು, ಹಿಂದಿರುಗಿ ಬಂದು ಉಳಿ ದವರಿಗೆ ತಿಳಿಸಿ, ಅವರೂ ಆನಂದದಲ್ಲಿ ಭಾಗಿಗಳಾಗುವಂತೆ ಮಾಡುತ್ತಾನೆ. ನಿತ್ಯಸಿದ್ಧರು, ಅವತಾರ ಪುರುಷರು ಇಂತಹ ವರು. ಇವರಲ್ಲಿ ಕಾಣುವ ಲೋಕಕಲ್ಯಾಣದ ಇಚ್ಛೆಯನ್ನು ವಿವರಿಸಲಾಗುವುದಿಲ್ಲ. *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪುಟ ೯೭)*

ಸಾಕ್ಷಾತ್ಕಾರವನ್ನು ವರ್ಣಿಸುವಾಗ 'ಅದೊಂದು ಬೆಳಕಿನ